ಸಂಕ್ರಾಂತಿಯ ಸಮಯಕ್ಕೆ ಕಾಡಂಚಿನ ಮುತ್ತುಗ ಮತ್ತು ಬೂರುಗ ಮರಗಳು ಹೂ ತಳೆದಿರುತ್ತವೆ. ಚುಮು ಚುಮು ಚಳಿಯ ಬೆಳಗು ಮಂಜಿನಲ್ಲಿ ಮಿಂದಿರುತ್ತದೆ. ಬಿಸಿಲೇರುತ್ತಿದ್ದಂತೆ ಹಕ್ಕಿಗಳ ಚಿಲಿಪಿಲಿ ಜೋರಾಗುತ್ತದೆ. ವಿದ್ಯುತ್ ತಂತಿಯ ಮೇಲೆ ಕುಳಿತ ಜೋಡಿ ಕುಟುರಗಳು ಕೂಗತೊಡಗಿದಾಗ ಮನಸ್ಸು ಬಾಲ್ಯಕ್ಕೆ ಹೋಗುತ್ತದೆ. ಬೇಲಿಸಾಲಿನಲ್ಲಿ ಅರಳಿದ ಕೆಂಪು ಭೂತಾಳಿ ಹೂಗಳು, ದೇವಕಣಗಿಲೆ ಹೂಗಳು ನಮ್ಮನ್ನು ಆಕರ್ಷಿಸುತ್ತಿದ್ದವು. ದೇವಕಣಗಿಲೆ ಹೂವನ್ನು ಕಡ್ಡಿಯ ತುದಿಗೆ ಸಿಕ್ಕಿಸಿಕೊಂಡು ಕೈಲಿ ಹಿಡಿದು ವೇಗವಾಗಿ ಓಡಿದಾಗ ಅದು ಕಡ್ಡಿಯ ತುದಿಯಲ್ಲಿ ಗಿರಿಗಿರಿ ತಿರುಗುವಾಗ ಮನ ಹಕ್ಕಿಯಾಗುತ್ತಿತ್ತು. ಮಾವಿನ ಮರದಡಿಯ ಆಲೆಮನೆಯಿಂದ ಬೆಲ್ಲದ ಪರಿಮಳವನ್ನು ಬೀಸಿ ಬರುವ ಗಾಳಿ ಹೊತ್ತು ತರುತ್ತದೆ. ಮನೆಯಿಂದ ಇನ್ನೂರು ಮೀಟರ್ ದೂರದಲ್ಲಿ ನಡೆಯುತ್ತಿದ್ದ ಆಲೆಮನೆಗೆ ದಿನಕ್ಕೆ ನೂರು ಸಲ ಹೋಗುತ್ತಿದ್ದೆವು. ಕಬ್ಬಿನ ಹಾಲು ಕುಡಿಯಲು, ಕಬ್ಬು ತಿನ್ನಲು, ನೊರೆ ಬೆಲ್ಲ ತಿನ್ನಲು, ಗಾಣ ತಿರುಗುವುದನ್ನು ನೋಡಲು, ಕೊನೆಗೆ ಇಬ್ಬನಿ ಹಿಟ್ಟು (ಹಾಲು ಬಾಯಿ) ಮಾಡಲು ಕಬ್ಬಿನ ಹಾಲು ಬೇಕಂತೆ ಎಂದು ಹೇಳಲು – ಹೀಗೆ ಏನಾದರೊಂದು ನೆಪ ಮಾಡಿಕೊಂಡು. ರಜೆ ಇದ್ದ ದಿನ ಅಲ್ಲೇ ಠಿಕಾಣಿ. ಆಲೆಮನೆಯ ದೊಡ್ಡ ಒಲೆಯ ಸಮೀಪ ಹೋಗಲು ಮಕ್ಕಳಿಗೆ ಅನುಮತಿ ಇರಲಿಲ್ಲ. ಬೆಲ್ಲದ ಕಡಾಯಿ ಕೆಳಗೆ ಇಳಿದು ಅದನ್ನು ಉದ್ದನೆಯ ಮರದ ಮರಿಗೆಗೆ ಸುರಿದ ಮೇಲೆ ನಾವು ಬಾಳೆ ಎಲೆಯ ತುಂಡನ್ನು ಹಿಡಿದುಕೊಂಡು ಎಂದೂ ನೊರೆ ಬೆಲ್ಲವನ್ನೇ ಕಂಡಿರದವರಂತೆ ಆಸೆಗಣ್ಣುಗಳಿಂದ ಹೋಗಿ ನಿಂತ ಕೂಡಲೆ ಸೌಟಿನಿಂದ ಬಂಗಾರದ ಬಣ್ಣದ ನೊರೆನೊರೆಯಾದ ಬೆಲ್ಲ ಬೀಳುತ್ತಿತ್ತು. ಅದನ್ನು ಪಕ್ಕದಲ್ಲೇ ಇದ್ದ ನೇರಳೆ ಎಲೆಯನ್ನು ಕಿತ್ತು ಚಮಚೆಯಂತೆ ಮಾಡಿಕೊಂಡು ತಿನ್ನುತ್ತಿದ್ದೆವು. ನಿಜಹೇಳಬೇಕೆಂದರೆ ನಾಲಿಗೆಯಿಂದ ಚೂರು ಚೂರೆ ನೆಕ್ಕಿ ಚಪ್ಪರಿಸುತ್ತಿದ್ದೆವು. ಕಬ್ಬಿನ ಗದ್ದೆಯಲ್ಲಿ ಒಂದಷ್ಟು ಕಬ್ಬುಗಳನ್ನು ಕಡಿಯದೇ ಹಾಗೇ ಬಿಟ್ಟಿರುತ್ತಿದ್ದರು. ಆಲೆಮನೆ ಮುಗಿದು ಮನೆಯಲ್ಲಿದ್ದ ಕಬ್ಬೂ ತಿಂದು ಮುಗಿದ ಮೇಲೆ ಗದ್ದೆಯಲ್ಲಿನ ಆ ಕಬ್ಬುಗಳನ್ನು ಒಂದೊಂದಾಗಿ ತಂದು ತಿನ್ನುವ ಸುಖ. ಹತ್ತಿರದಲ್ಲಿ ತರಕಾರಿ ಹಿತ್ತಿಲು. ಅಲ್ಲಿ ಎಳೇಸೌತೆಕಾಯಿ ಸಿಗುತ್ತಿತ್ತು. ತೋಟದ ಪಕ್ಕ ಪನ್ನೇರಲೆ ಹಣ್ಣು. ಹೀಗೆ ಸಂಕ್ರಾಂತಿಯ ಜತೆಗೆ ಇವೆಲ್ಲ ನೆನಪೂ.



ರಸ್ತೆಯಲ್ಲಿ ಸೊಪ್ಪು ಮಾರುವವಳ ಕೂಗು ನನ್ನನ್ನು ಇಪ್ಪತ್ತೊಂದನೇ ಶತಮಾನಕ್ಕೆ ಮರಳಿ ತರುತ್ತದೆ. ಈಗ ಕಬ್ಬಿನ ಹಾಲು ಅಂಗಡಿಯಲ್ಲಿ ಸಿಗುತ್ತದೆ. ಬೇಕೆನಿಸಿದಾಗ ಕುಡಿಯಬಹುದು. ಆದರೆ ಗದ್ದೆಯ ನಡುವಿನ ಆಲೆಮನೆಯ ಪರಿಮಳದ ನಡುವೆ ಕಬ್ಬಿನ ಹಾಲು, ನಮ್ಮದೇ ಗದ್ದೆಯ ಕಬ್ಬಿನ ಹಾಲು ಕುಡಿಯುವ ಸುಖವೇ ಬೇರೆ. ಮೂರು ಮೈಲು ದೂರದ ಶಾಲೆಯಿಂದ ಮನೆಗೆ ಬರುವ ದಾರಿಯಲ್ಲಿ ಒಂದು ಆಲೆಮನೆ ಸಿಗುತ್ತಿತ್ತು.ನಾವು ನಾಲ್ಕೈದು ಮಕ್ಕಳು ಅಲ್ಲಿ ಕಬ್ಬು ತಿನ್ನುವ ಆಸೆಯಿಂದ ಹೋಗುತ್ತಿದ್ದೆವು. ಅವರು 'ಕಬ್ಬು ಬೇಕಾ, ಇಲ್ಲ ಕಬ್ಬಿನ ಹಾಲಾ?' ಎಂದು ಕೇಳಿದಾಗ, ಮನದಲ್ಲೇ 'ಎರಡೂ ಕೊಡಲು ಇವರಿಗೇನು' ಅಂದುಕೊಂಡು, ದಾರಿಯುದ್ದಕ್ಕೂ ತಿನ್ನುತ್ತ ಹೋಗಬಹುದೆಂದು 'ಕಬ್ಬೇ ಕೊಡಿ' ಅನ್ನುತ್ತಿದ್ದೆವು. ಅವರು ಎರಡಡಿ ಉದ್ದದ ಕಬ್ಬಿನ ತುಂಡು ಕೊಡುತ್ತಿದ್ದರು. ನಾವು ಅದರ ಸಿಪ್ಪೆ ತೆಗೆಯುತ್ತ ಕಬ್ಬು ಜಗಿದು ರಸ ಹೀರುತ್ತಾ ದಾರಿ ಸಾಗಿಸುತ್ತಿದ್ದೆವು. ಮನೆಯಲ್ಲಿ ಮಾತ್ರ ಹೀಗೆ ಯಾರದ್ದೋ ಮನೆಯ ಆಲೆಮನೆಯಲ್ಲಿ ಕಬ್ಬು ಕೇಳಿದ್ದನ್ನು, ಬೆಲ್ಲ ತಿಂದಿದ್ದನ್ನು ಹೇಳುತ್ತಿರಲಿಲ್ಲ.

ಪ್ರತೀ ಸಲ ಮೈಸೂರಿಗೆ ಹೋಗುವಾಗಲೂ ಬೆಳಿಗ್ಗೆ ಬೇಗ ಆರಕ್ಕೆ ಹೊರಟು, ದಾರಿಯಲ್ಲಿ ಬೀರೂರಿನ 'ಪ್ರೀತಿ ಹೋಟೆಲ್'ನಲ್ಲಿ ತಿಂಡಿ ತಿಂದು ಮೈಸೂರು ಇನ್ನೊಂದು ಗಂಟೆಯ ಡ್ರೈವ್ ಇದೆ ಅನ್ನುವಾಗ ಸಿಗುವ ಪುಟ್ಟ ಹಳ್ಳಿಯಲ್ಲಿ ರಸ್ತೆಯ ಪಕ್ಕ ಮಾವಿನ ಮರದ ನೆರಳಿನಲ್ಲಿ ಕಬ್ಬಿನ ಹಾಲು ಮಾರುವ ಗಾಡಿಯ ಬಳಿ ನಿಂತು ಕಬ್ಬಿನ ಹಾಲು ಕುಡಿದು ಹೋಗುತ್ತಿದ್ದೆವು. ಆ ರೈತನ ಬಳಿ ಮಳೆ–ಬೆಳೆ, ಕಬ್ಬು ನಿಮ್ಮದಾ, ಇತ್ಯಾದಿ ಲೋಕಾಭಿರಾಮದ ಮಾತುಕತೆ ನಡೆಯುತ್ತಿತ್ತು. ಅಷ್ಟು ಶುಚಿ ರುಚಿ ಇರುವ ಹಾಲಿಗೆ ಬರೀ ಹತ್ತು ರೂ ತೆಗೆದುಕೊಳ್ಳುವ ಅವರ ಪ್ರಾಮಾಣಿಕತೆಗೆ ಮೆಚ್ಚುಗೆಯಾಗುತ್ತಿತ್ತು. ಮೊನ್ನೆ ಹೋದಾಗ ಅವರ ಪತ್ನಿ ಇದ್ದರು. ಅವರೇ ಯಂತ್ರ ತಿರುಗಿಸಿ ಹಾಲು ಕೊಟ್ಟರು. 'ಎಷ್ಟು ಮಕ್ಕಳು' ಅಂತ ಕೇಳಿದಾಗ – 'ಇಬ್ಬರು, ಮೊದಲನೆಯವನು ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾನೆ. ಮಗಳು ಸಿ.ಎ. ಮಾಡುತ್ತಿದ್ದಾಳೆ' ಅಂದರು. ರೈತರ ಪರಿಸ್ಥಿತಿ ಸುಧಾರಿಸುತ್ತಿದೆ, ಪರವಾಗಿಲ್ಲ ಅನಿಸಿತು. ಆದರೆ ನಮ್ಮ ಮಲೆನಾಡಿನಲ್ಲಿ ಕೃಷಿಕಾರ್ಮಿಕರ ಕೊರತೆಯಿಂದ ಕಬ್ಬು, ಭತ್ತ ಬೆಳೆಯುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ. ಆಲೆಮನೆಯನ್ನು ನೋಡದಿರುವ ಮಕ್ಕಳೇ ಜಾಸ್ತಿ. ಆಲೆಮನೆಯ ಪ್ರತಿಕೃತಿಗಳನ್ನು ಮಾಡಿಟ್ಟಿರುವ ಹೆರಿಟೇಜ್ ವಿಲೇಜ್‌ಗಳಿಗೆ ಕರೆದೊಯ್ದು ತೋರಿಸಬೇಕು.

ಸಂಕ್ರಮಣ ಎಂದಾಗ, ನನ್ನ ಅತ್ತೆ ಪ್ರತಿ ಸಂಕ್ರಾಂತಿಗೆ ಎಳ್ಳು, ಸಕ್ಕರೆ ಅಚ್ಚು, ಸಿಹಿ ತಿಂಡಿಗಳನ್ನು ಪಾರ್ಸೆಲ್ ಕಳಿಸುತ್ತಿದ್ದುದು ನೆನಪಾಗುತ್ತದೆ. ಕೊನೆಕೊನೆಗೆ ಕೈ ಸೋತಾಗಲೂ ಕಳಿಸುವುದು ಬಿಡಲಿಲ್ಲ. ಸಮೀಪದಲ್ಲಿದ್ದ ಕೊರಿಯರ್ ಆಫೀಸ್‌ಗೆ ಹೋಗಿ ಕಳಿಸುತ್ತಿದ್ದರು. '..ಗೆ ಆಶೀರ್ವಾದಪೂರ್ವಕ' ಅನ್ನುವ ಕಾಗದ ಜತೆಗಿರುತ್ತಿತ್ತು. ಜತೆಗೆ ಅಯ್ಯಂಗಾರ್ ಬೇಕರಿಯ ಕಜ್ಜಾಯ, ಬೆಲ್ಲದ ಮಿಠಾಯಿ ಸಹಾ. ಇನ್ನು ಅದೆಲ್ಲ ಬರೀ ನೆನಪು. ಅವರ ಜೀವನಾಸಕ್ತಿ ಸಂಕ್ರಾಂತಿಯ ಜತೆಗಿದೆ. ನನ್ನ ಅತ್ತೆಯಿಲ್ಲದೆ ಸಂಕ್ರಾಂತಿ ಬಂದುಹೋಗಿದೆ. ಜೀವನಚಕ್ರ ಮುಂದೆ ಉರುಳಿದೆ. ಅವರು ನನ್ನ ಮಗನ ಮೊದಲನೆಯ ಹುಟ್ಟುಹಬ್ಬದ ನಂತರದ ಸಂಕ್ರಾಂತಿಯಲ್ಲಿ ಎಳ್ಳು ತಯಾರಿಸಿಕೊಂಡು ನಮ್ಮ ಮನೆಗೆ ಬಂದಿದ್ದರು. ನನ್ನ ಕೆಲವು ಸಹೋದ್ಯೋಗಿಗಳಿಗೂ ಸ್ನೇಹಿತರಿಗೂ ಕೊಟ್ಟೆವು.

ಮಾಧ್ಯಮಗಳು ವೈಜ್ಞಾನಿಕ ಆಚರಣೆಗಳನ್ನೂ ಮೂಢನಂಬಿಕೆಗಳಾಗಿಸಿವೆ. ಸಾಮಾಜಿಕವಾಗಿ ಸಾಮರಸ್ಯ ಮೂಡಿಸಬೇಕಾದ ಹಬ್ಬ ಹರಿದಿನಗಳು ಬಿರುಕುಮೂಡಿಸುವ ಸಂಗತಿಗಳೂ ಆಚರಣೆಗಳೂ ಆಗಿವೆ. ಇಂತಹವರಿಗೆ ಸಂಕ್ರಮಣ ದಾಟುವ ಕ್ರಿಯೆಯಲ್ಲ. ಬದಲಾವಣೆಯೂ ಬೇಕಿಲ್ಲ. ಅವರು ಒಂದು ಬಗೆಯ ಯಥಾಸ್ಥಿತಿವಾದಿಗಳು. ಇಂತಹವರ ಸಂಖ್ಯೆ ಕಡಿಮೆ ಅನ್ನುವುದು ಸಮಾಧಾನದ ವಿಷಯ. ಧನಾತ್ಮಕವಾಗಿ ಯೋಚಿಸುವವರ ಸಂಖ್ಯೆಯೇ ಹೆಚ್ಚು. ಸಂಕ್ರಮಣವನ್ನು ಚಲನಶೀಲ ಸಮಾಜದ ಸಂಕೇತವಾಗಿ ಪರಿಗಣಿಸೋಣ.

**ಸಂಕ್ರಮಣ ಎಂದಾಗ ನನ್ನ ಅತ್ತೆ ಪ್ರತಿ ಸಂಕ್ರಾಂತಿಗೆ ಎಳ್ಳು, ಸಕ್ಕರೆ ಅಚ್ಚು, ಸಿಹಿತಿಂಡಿಗಳನ್ನು ಪಾರ್ಸೆಲ್ ಕಳಿಸುತ್ತಿದ್ದುದು ನೆನಪಾಗುತ್ತದೆ.**